ವಿಚಾರ ಲಹರಿ

# ನಲ್ಲ, ಪೋಗದಿರು ಬೇಸಿಗೆಯಲಿ- ಬೇಡುವಳಬಲೆ!

**ಬಂತು ಗ್ರೀಷ್ಮ!**

ಮನುಷ್ಯ ಬಿಸಿಯುಸಿರು ಬಿಡುತ್ತಾನೆ; ಪ್ರಾಣಿ ಪಕ್ಷಿಗಳು ಬಿಸಿಲಬೇಗೆ ತಾಳಲಾರದೆ ತಂಪನ್ನರಿಸಿ ಸುತ್ತುತ್ತವೆ; ಮರಗಿಡಗಳಂತೋ ಬೇಗೆ ತಾಳಲಾರದೆ ನರಳಿ, ಒಣಗಿ ಎಲೆಯುದುರಿಸಿ ಅಳುತ್ತವೆ; ಅವು ಹಲವು ವೇಳೆ ಜೀವವನ್ನೇ ತ್ಯಾಗ ಮಾಡಬೇಕೆಂಬ ತಾಳಲಾರದ ಸ್ಥಿತಿಯಿಂದ ಬರಲು ಬರಲಾಗಿ ಒಣಗಿ ನಿಂತು ಅಗ್ನಿ ಬಂದು ಸುಟ್ಟು ಬೇಗೆ ಸಂಕಟಕ್ಕೆ ಮುಕ್ತ ನೀಡಬಾರದೆ? ಎಂದು ಹಂಬಲಿಸುತ್ತವೆ.

ಆಕಾಶವೂ ಅಷ್ಟೆ. ಪ್ರಖರ ಸೂರ್ಯನ ಕಿರಣ ತೀಕ್ಷ್ಣತೆಗೆ ತನ್ನ ನೀಲಮೈಯನ್ನು ಮಂಕಾಗಿಸಿಕೊಂಡುಬಿಡುತ್ತದೆ. ತೆಳು ಬಿಸಿಲಬಿಳುಪು ನೀಲಮೆಗೆ ತೆಳು ಪರದೆ ಕಟ್ಟಿರುವಂತೆ ದಿಗಿಲು ಹುಟ್ಟಿಸುತ್ತದೆ. ಆಕಾಶದಲ್ಲಿ ನೂರಾರು ಲಕ್ಷ ವರ್ಷಗಳ ಸೇಡನ್ನು ತೀರಿಸಿಕೊಳ್ಳುವ ಭರದಲ್ಲಿ ಸೂರ್ಯ ಭೂಮಿಯನ್ನು ಸುಡುತ್ತಿದ್ದಾನೆ. ಜೀವಿ ಜೀವ ಸಂಕುಲಕ್ಕೆ ಕುಡಿವ ನೀರಿಲ್ಲದ ಹಾಗೆ ಮಾಡೇ ಮಾಡುತ್ತೇನೆಂಬ ಹಠಕ್ಕೆ ಬಿದ್ದವನಂತೆ ನೆಲದ ಜೀವ ಜಲವ ಅನಿಲಗೊಳಿಸಿ ಎಳೆ ಎಳೆದು ಸೇದುತ್ತಿದ್ದಾನೆ. ಅಯ್ಯೋ, ಇದು ಎಂಥ ಸುಡು ಬೇಸಿಗೆ!

ಆದರಿದು ಬರಗಾಲವಲ್ಲ; ಬಿರು ಬೇಸಿಗೆ! ಕೆರೆ ಕಟ್ಟೆಗಳು ಸುಂಡಿಹೋಗಿವೆ; ನೀರನ್ನರಿಸಿ ಪಕ್ಷಿಗಳು ವಲಸೆ ಹೋಗುತ್ತಿವೆ. ನದಿಗಳು ಬತ್ತಿಹೋಗಿವೆ; ಕಪ್ಪೆಗಳು ತಂಪನ್ನರಿಸಿ ಬಿಲಸೇರಿವೆ; ಮೀನುಗಳು ಕೆಸರು ಹೊಂಡದಲ್ಲಿ ಏದುಸಿರುಬಿಡುತ್ತಿವೆ; ಹಲವು ಕೆಸರಲ್ಲಿ ಕೆಸರ ಜೊತೆ ಜೊತೆಯಲ್ಲೇ ಒಣಗಿ ತರಗಾಗಿವೆ. ಪ್ರಾಣಿಗಳು ನೀರಿಗಾಗಿ ಹಂಬಲಿಸಿ ಹುಡುಕಾಡಿ ಅಲೆದಲೆದು 'ಶಿವ ಶಿವ' ಎಂದಿವೆ. ಜನಪದ ಕವಿ ಹೇಳುತ್ತಾನೆ: 'ನೀರಿಲ್ದ ಕೆರೆಗೆ ಕರಬಂದು, ಹೋಗಾಗ, ನೋಡದರ ದುಃಖಗಳಾ!'

ರಾತ್ರಿಯ ಕಷ್ಟವಂತೋ ಹೇಳತೀರದು. ಉಸ್ಸೆಂದೋ ಸುಸ್ತೆಂದೋ ಹಗಲು ಹೇಗೋ ಕಳೆದು ಹೋಗುತ್ತದೆ. ಆದರೆ ಸಂಜೆಯಾಯಿತೆಂದರೆ ಸಹಸಿಲಾಗದ ದಗೆ! ಗಂಡಸರು ಅತಿ ಕಡಿಮೆ ಬಟ್ಟೆ ಧರಿಸಿ ಗಾಳಿ ಪಾಳಿ ಹಾಕಿಕೊಂಡು ಸೆಕೆಯ 'ಸುಖ' ಅನುಭವಿಸುತ್ತಾರೆ. ಆದರೆ ಹೆಂಗಸರ ಪಾಡಂತೋ ಅನುಭವಿಸಿಯೇ ತಿರಬೇಕು. ಇದು ಪವಿತ್ರ ಪುಣ್ಯಭೂಮಿ; ಮಡಿ ಮೈಲಿಗೆ ಇರುವ ದೇಶ; ತಗ್ಗಿ ಬಗ್ಗಿ ನಡೆಯ ಬೇಕು; ಮೈತುಂಬಾ ಬಟ್ಟೆ ಹಾಕಬೇಕು. ಹಾಗೆ ಹಾಕುವುದರಿಂದ ಈ ದೇಶದ ಸಂಸ್ಕೃತಿ ಬಾಳುತ್ತದೆ; ಹೆಂಗಸರೆ ಅದನ್ನು ಮುಂದುವರಿಸಿಕೊಂಡು ಹೋಗಬೇಕು– ಎಂದೆಲ್ಲಾ ನಂಬಿರುವ ನಮ್ಮ ವ್ಯವಸ್ಥೆ ಸೆಕೆಗಾಗಿ ಅರೆನಗ್ನವಾಗುವುದನ್ನು ಒಪ್ಪುವುದಿಲ್ಲ. ಹೀಗಾಗಿ ಹೆಂಗಸರು ರಾತ್ರಿಯೆಲ್ಲಾ ಪಡುವ ಸೆಕೆ ಕಷ್ಟವನ್ನು ನೋಡಲಾಗುವುದಿಲ್ಲ. 'ಎಷ್ಟೊತ್ತಿಗೆ ಬೆಳಗಾದೀತಪ್ಪ' ಎಂದು ಅವರು ಕಾಯುವಂತಾಗುತ್ತದೆ.

ನಮ್ಮ ಕನ್ನಡ ಕವಿಗಳು ಋತು ವರ್ಣನೆಯನ್ನು ಮಾಡುವಾಗ ಗ್ರೀಷ್ಮವನ್ನು ಮರೆತಿಲ್ಲ. ಆದರೆ ಹಿಂದಿಯ ಕವಿಯೊಬ್ಬ ಮಾಡುವ ಗ್ರೀಷ್ಮದ ವರ್ಣನೆ ಗಮನ ಸೆಳೆಯುತ್ತದೆ;

ದೀರ್ಘದಿನ, ನಿಶಿಹೀನ, ಕ್ಷೀಣ ಜಲಧರ ವೈಶ್ವಾನರ,
ಮುದಿತ ಚಕ್ರವಾಕ ಚಿತ್ತ, ಉದಿತರವಿ, ಬಳಲಿಹನು ಹಾದಿಯ ನರ,
ಬೀಸುತಿಹುದು ಬೆಂಕಿ ಗಾಳಿ, ತಪಿಸುತಿಹುದು ತನುಮನವನು,
ಒಣಗಿಹುದು ಕೆರೆ ಕಟ್ಟೆ, ಕೆಸರ ಬಸಿರಲಿ ಒದ್ದಾಡುತಿಹುದು ಮೀನು,
ಕಾಂಬುದು ದಿಗಂಬರನೋಲು ಬೋಳು ಮರವು, ಉದುರಿಹುದು ತರುಲತೆಗಳೆಲೆ,
ದುಃಖಿಗಳು ಸಂಪನ್ನ ವಿಪನ್ನರೆಲ್ಲರು; ನಲ್ಲ, ಪೋಗದಿರು ಬೇಸಿಗೆಯಲಿ–ಬೇಡುವಳಬಲೆ.

ಕಡು ಬೇಸಿಗೆಯ ಮಲೆಸೀಮೆಯ ಕಾಡುಗಳನ್ನು ನೋಡಬೇಕು. ಎತ್ತರೆತ್ತರಕ್ಕೆ ಬೃಹತ್ ಮರಗಳು; ಅವುಗಳ ಅಕ್ಕಪಕ್ಕದಲ್ಲಿ ಬೆಳೆದ ಕಿರು ಮರಗಳು; ಅವುಗಳ ಇಕ್ಕೆಲ್ಲಗಳಲ್ಲಿ ಬೆಳೆದ ಗಿಡ ಪೊದೆಗಳು; ಇವೆಲ್ಲದರ ಬುಡದಲ್ಲಿ ನೆಲದಲ್ಲಿ ಹಾಸುಗೆಯಂತೆ ಹಾಸುಕೊಂಡಿರುವ ಹುಲ್ಲುಗಳು; ಇವುಗಳನ್ನೆಲ್ಲ ಬಂಧಿಸುತ್ತ ಹಬ್ಬಿ ಹರಡಿರುವ ಬಳ್ಳಿಗಳು– ಎಲ್ಲವೂ ಒಣಗಿ ಕರಕಲಾಗುತ್ತವೆ. ಮಲೆನಾಡ ತಂಪೆಲ್ಲಿ ಮಾಯವಾಯಿತು? ನೀರೆಲ್ಲಿ ಹಿಂಗಿಹೋಯಿತು? ಕವಿ ಕುವೆಂಪು ಮೋಹಿಸಿದ ಹಸುರೆಲ್ಲಿ ಹಾರಿಹೋಯಿತು? ನಮ್ಮ ಪ್ರಶ್ನೆಗಳಿಗೆಲ್ಲ ಬಿಸಿಲೊಂದೇ ಉತ್ತರ! ಆ ಮಲೆನಾಡಿನ ಒಣಗಿದ ಸಸ್ಯ ಸಂಪತ್ತೆಲ್ಲಾ, ಅದನ್ನಂಟಿ ಜೀವ ಸಾಗಿಸುವ ಕ್ರಿಮಿಕೀಟ ಪ್ರಾಣಿ ಸಂಕುಲವೆಲ್ಲಾ ಬೆಂಕಿ ಎಲ್ಲಿ ಬಂದು ಆಹುತಿ ತೆಗೆದುಕೊಳ್ಳುತ್ತದೋ ಎಂಬ ಭಯದಲ್ಲಿ ಉಸಿರು ಹಿಡಿದು ಬದುಕುತ್ತವೆ.

ಇದಕ್ಕಿಂತ ಕಾರವ ನರಕ ಸದೃಶ ಬದುಕು ಬಯಲಸೀಮೆಯದು. ಅಲ್ಲಿ ಬೇಸಿಗೆಯ ದಗೆಯೊಂದೇ ಸತ್ಯ; ಮಿಕ್ಕೆಲ್ಲವೂ ಮಿಥ್ಯ! ನಗರಗಳಂತೋ ತಾವೇ ಸೃಜಿಸಿಕೊಂಡಿರುವ ನಗರಾರಣ್ಯದ ಬೆಂಕಿ ವೃತ್ತದಲ್ಲಿ, ಶಾಖ ಕೇಂದ್ರಿತ ಸೆಲ್ಲುಗಳಲ್ಲಿ ಸಿಲುಕಿ ನರಳುವ ಪರಿ–ಯಾತನಾ ಶಿಬಿರ! ನಮ್ಮ ಕವಿ ಕೆ.ಎಸ್.ನ ಅವರು ಹೇಳುವಂತೆ ನಗರ ಬದುಕು– 'ಗಿಳಿ ಕೋಗಿಲೆ ಹಾಡಿದರೂ ತಲೆದೂಗದ ಬಾಳು.'

ಇದಕ್ಕೆಲ್ಲ ಒಂದೇ ಪರಿಹಾರ: ಮಳೆರಾಯನ ಕೃಪೆ ಭುವಿಯ ಮೇಲೆ ಬೀಳಬೇಕು, ಜಗದ ತಾಪ ಪರಿಹಾರಕ ಮಳೆರಾಯನನ್ನು ನಮ್ಮ ಜನ ಮೈಮನದಿಂದ ಹೀಗೆ ಪ್ರಾರ್ಥಿಸುತ್ತಾರೆ: ಬಾರೋ ಬಾರೋ ಮಳೆರಾಯ ಬಾಳೆ ತೋಟಕೆ ನೀರಿಲ್ಲ
ಹುಯ್ಯೋ ಹುಯ್ಯೋ ಮಳೆರಾಯ ಹೂವಿನ ತೋಟಕೆ ನೀರಿಲ್ಲ
ಬಂದುಯ್ಯೋ ಮಳೆರಾಯ ಕೆರೆ ಕಟ್ಟೆಗೆ ನೀರಿಲ್ಲ...

ಅವರೊಡನೆ ನಮ್ಮ ದನಿಯು ಸೇರಿ ಅನುರಣಗೊಳ್ಳಬೇಕು, ಅಷ್ಟೆ.

■ ಶಿಕಾಕು

---

# ಮಾತೇ ಮುತ್ತು

★ ಹಣವನ್ನು ನಂಬಿಕೆ ಇರುವವರಲ್ಲಿ ಇಡು, ಆದರೆ ನಂಬಿಕೆಯನ್ನು ಹಣದಲ್ಲಿ ಇಡಬೇಡ.
–ಆಲಿವರ್ ವೆಂಡಲ್ ಹೋಂಸ್

★ ದುಡ್ಡೆಂದರೆ ಬಲ, ಬಲವೆಂದರೆ ದುಡ್ಡು, ಈ ಎರಡೂ ಇದ್ದರೆ ಬಿಡು, ಸ್ವರ್ಗವ ಕಿತ್ತುಬಿಸಾಕು.
–ಗೋಪಾಲಕೃಷ್ಣ ಅಡಿಗ

★ ಹಣದಾಸೆಯೇ ಎಲ್ಲ ಕೆಟ್ಟದ್ದರ ಮೂಲ.
–ಬೈಬಲ್

★ ಹಣ ವಿವೇಕಿಗಳ ಸೇವಕ; ದಡ್ಡರ ಯಜಮಾನ.
–ಫ್ರೆಂಚ್ ಗಾದೆ

★ ಹಣಕ್ಕೆ ಕಾಲಿಲ್ಲ, ಆದರೂ ಓಡುತ್ತದೆ. ಕಿವಿ ಇಲ್ಲ, ಆದರೂ ಕೇಳುತ್ತದೆ.
–ಜಪಾನಿ ಗಾದೆ

★ ಹಣ ಇರುವವನೇ ಸತ್ಕುಲದಲ್ಲಿ ಹುಟ್ಟಿದವನು! ಅವನೇ ಪಂಡಿತ, ಅವನೇ ಶಾಸ್ತ್ರಜ್ಞ, ಗುಣಶಾಲಿ, ವಾಗ್ಮಿ, ರೂಪವಂತ... ಎಲ್ಲ ಗುಣಗಳೂ ಹಣವನ್ನೇ ಆಶ್ರಯಿಸುತ್ತವೆ!
–ಭರ್ತೃಹರಿ

★ ಲೈಂಗಿಕ ನೀತಿ ಸಂಹಿತೆಯಲ್ಲಿ ಎರಡೇ ಎರಡು ಅಕ್ಷಮ್ಯ ಅಪರಾಧಗಳಿವೆ; ಒಂದು ಅತ್ಯಾಚಾರ, ಎರಡು ಕೊಟ್ಟ ಮಾತಿಗೆ ತಪ್ಪುವುದು. ಮೂರನೆಯ ಅಪರಾಧವೂ ಒಂದಿದೆ. ಅದೆಂದರೆ ಇನ್ನೊಬ್ಬರಿಗೆ ನೋವು ಕೊಡುವುದು.
–ರಾಮ ಮನೋಹರ ಲೋಹಿಯಾ

★ ಹಳ್ಳಿಯಲ್ಲಿ ವಾಸ ಮಾಡಿಲ್ಲದಿದ್ದರೆ ನಿನಗೆ ಕಷ್ಟವೆಂದರೇನೆಂದು ತಿಳಿಯದು.
–ಚೀನಾ ಗಾದೆ

★ ಬಾಳಲಿಕ್ಕೆ, ಬದುಕಲಿಕ್ಕೆ ಬುದ್ಧಿ ಬೇಕು... ಸಾಯಲಿಕ್ಕೆ ಹೆಚ್ಚು ಬುದ್ಧಿ ಬೇಕಾಗಿಲ್ಲ.
–ದ.ರಾ.ಬೇಂದ್ರೆ

★ ಸಜ್ಜನರಿಗೆ ಬಂದ ವಿಪತ್ತು, ದುರ್ಜನರಿಗೆ ಬಂದ ಸಂಪತ್ತು– ಬಹುಕಾಲ ಉಳಿಯುವುದಿಲ್ಲ.
–ಹರಿಕಥೆ ವಿದ್ವಾನ್ ಗುರುರಾಜುಲು ನಾಯ್ಡು

★ ಬಹುಪತಿತ್ವ ರೂಢಿಯಲ್ಲಿದ್ದಿರಬಹುದು ಎಂದು ಹೇಳಲಾದ ಮಹಾಭಾರತದ ಕಾಲದಲ್ಲೇ ಕುಂತಿಯು ತನ್ನ ವಿವಾಹ ಪೂರ್ವ ಸಂತಾನ ಕರ್ಣನನ್ನು ತೊರೆಯಬೇಕಾಯಿತು. ಇದರಿಂದಾಗಿ ಕರ್ಣನ ಬದುಕಲ್ಲಿ ಎಂತಹ ದುರಂತ ಸಂಭವಿಸಿತು ಎಂಬ ಅರಿವಿದ್ದೂ ವಿವಾಹಪೂರ್ವ ಲೈಂಗಿಕತೆ ಸಮರ್ಥಿಸಿಕೊಳ್ಳುವವರಿಗೆ ಏನು ಹೇಳಬೇಕು?
–ಅನುಭವಾಮೃತ